5-10-2001ರಂದು ಮೀಟಿಂಗ್ ಕೂಡ ಮಾಡಿದ್ದೇನೆ. ಇದರಲ್ಲಿ ಎಲ್ಲಾ ಮಹಾನಗರಪಾಲಿಕೆಯ ಹಾಗೂ ಪುರಸಭೆಯ ಅಧಿಕಾರಿಗಳನ್ನು ಕರೆದು ಮಾತನಾಡಿದ್ದೇನೆ. ಬರತಕ್ಕಂಥ ಹಣವನ್ನು ನಮ್ಮ ಇಲಾಖೆಗೆ ನೇರವಾಗಿ ಬೇಗನೆ ಕೊಡುತ್ತಿಲ್ಲ. ಆದುದರಿಂದ ಇನ್ನು ಮುಂದೆ ಬೇಗ ಕೊಡಬೇಕೆಂದು ಕೇಳಿಕೊಂಡಿದ್ದೇನೆ. ಬಾಕಿಯನ್ನು ವಸೂಲು ಮಾಡಲು ಪ್ರಯತ್ನ ಮಾಡುತ್ತಿದ್ದೇನೆ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್: ಈಗ ವಸೂಲಾಗಿರುವ ಹಣವನ್ನು ಯಾವ ಯಾವ ಜಿಲ್ಲೆಗೆ ವಿನಿಯೋಗ ಮಾಡಿದ್ದೀರಿ ಎಂಬ ಬಗ್ಗೆ ಹೇಳಬೇಕು. ಇನ್ನು ರಾಜಾರಾಮ್ ಮೋಹನ್‌ರಾಯ್ ಪ್ರತಿಷ್ಠಾನದಿಂದ ಕಟ್ಟಡವನ್ನು ಕಟ್ಟುವುದಕ್ಕೆ ಬಂದಿರತಕ್ಕಂಥ ಹಣ ವಿನಿಯೋಗವಾಗಿಲ್ಲ, ಈ ಕರದಿಂದ ಅದಕ್ಕೆ ಮ್ಯಾಚಿಂಗ್ ಗ್ರ್ಯಾಂಟ್ ಕೊಡುವುದಕ್ಕೆ ಸಾಧ್ಯವಿದೆಯೇ ಎಂಬ ಬಗ್ಗೆ ಹೇಳಬೇಕು. ಇನ್ನು ಇಂಗ್ಲೀಷ್ ಪುಸ್ತಕವನ್ನು ಗ್ರಂಥಾಲಯ ಪ್ರಾಧಿಕಾರದಿಂದ ಏಕೆ ಖರೀದಿ ಮಾಡುತ್ತಿದ್ದೀರಿ ಎಂಬ ಬಗ್ಗೆ ಹೇಳಬೇಕು.

ಶ್ರೀ ಬಾಬುರಾವ್ ಚವಾಣ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಅಚ್ಚಕಟ್ಟಾದ ಉತ್ತರವನ್ನು ಕೊಟ್ಟಿದ್ದೇವೆ. ಈಗ ಇವರು ಸಪ್ಲಿಮೆಂಟರಿ ಪ್ರಶ್ನೆಯನ್ನು ಏನು ಕೇಳಿದ್ದಾರೆ ಅದಕ್ಕೆ ಉತ್ತರ ತರಿಸಲು ನನಗೆ ಕಾಲಾವಕಾಶ ಬೇಕು. ಇನ್ನು ರಾಜಾರಾಮ್ ಮೋಹನ್‌ರಾಯ್ ಲೈಬ್ರರಿ ಬಗ್ಗೆ ಸದಸ್ಯರು ಏನು ಹೇಳಿದ್ದಾರೆ. ಈಗ ಅನುದಾನ ಪಡೆದ ಗ್ರಂಥಾಲಯಕ್ಕೆ ಕೊಡಲು ನಮ್ಮಲ್ಲಿ ಅನುದಾನ ಇದೆ. ಪ್ರತಿ ಜಿಲ್ಲೆಗೆ 10 ಅನುದಾನಿತ ಗ್ರಂಥಾಲಯಕ್ಕೆ ಅನುದಾನ ಕೊಡಬೇಕು ಎಂದು ಸರ್ಕಾರದ ಚಿಂತನೆ ಇದೆ. ಅರ್ಜಿ ಬಂದರೆ ಪ್ರತಿ ಜಿಲ್ಲೆಗೆ 10 ಅನುದಾನಿತ ಗ್ರಂಥಾಲಯವನ್ನು ಕೊಡುವುದಕ್ಕೆ ಸರ್ಕಾರದ ನಿಲುವು ಏನಿದೆ ಆ ಪ್ರಕಾರ ಕೊಡುತ್ತೇವೆ.

ಬಾಗೇಪಲ್ಲಿ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 24(718)

ಸದಸ್ಯರ ಹೆಸರು: ಶ್ರೀ ಸಂಪಂಗಿ ಎನ್.(ಬಾಗೇಪಲ್ಲಿ)

ಉತ್ತರಿಸುವ ಸಚಿವರು: ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು)

ಪ್ರಶ್ನೆ

ಅ. ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿನ ಗ್ರಾಮೀಣ ಭಾಗದಲ್ಲಿ ಕುಡಿಯುವ

ನೀರಿನ ಅಭಾವವಿರುವುದು ಹಾಗೂ ಲಭ್ಯವಿರುವ ಕನಿಷ್ಟ ಪ್ರಮಾಣದ ನೀರಿನಲ್ಲಿ ಫ್ಲೋರೈಡ್ ಅಂಶ ಜಾಸ್ತಿ ಇರುವುದರಿಂದ ಜನತೆ ಫ್ಲೋರೋಸಿಸ್ ಖಾಯಿಲೆಯಿಂದ ನರಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಗ್ರಾಮೀಣ ಜನತೆಗೆ ಉತ್ತಮ ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು?

ಉತ್ತರ

ಅ. ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದ 289 ಗ್ರಾಮೀಣ ಜನವಸತಿಗಳ ಕುಡಿಯುವ ನೀರಿನಲ್ಲಿ ಅಧಿಕ ಫ್ಲೋರೈಡ್‌ನ ಸಮಸ್ಯೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ. ಗುಡಿಬಂಡೆ ತಾಲ್ಲೂಕಿನ 126 ಗ್ರಾಮಗಳು ಮತ್ತು ಬಾಗೇಪಲ್ಲಿ ತಾಲ್ಲೂಕಿನ 253 ಗ್ರಾಮಗಳಿಗೆ (90 ದಾರಿ ಮಧ್ಯದ ಗ್ರಾಮಗಳೂ ಸೇರಿದಂತೆ) ಸುರಕ್ಷಿತ ಕುಡಿಯುವ ನೀರಿನ ಪೂರೈಕೆಗಾಗಿ ಸಬ್ ಮಿಷನ್ ಕಾರ್ಯಕ್ರಮದಡಿ ರೂ.46.82 ಕೋಟಿ ಅಂದಾಜು ಮೊತ್ತದಲ್ಲಿ ಮೂರು ಯೋಜನೆಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿದೆ.

ಶ್ರೀ ಎನ್.ಸಂಪಂಗಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕಳೆದ ಬಾರಿ ಮತ್ತು ಅದರ ಹಿಂದಿನ ಅಧಿವೇಶನದಲ್ಲೂ ಕೂಡ ಇದೇ ಉತ್ತರವನ್ನು ಕೊಟ್ಟಿದ್ದಾರೆ. ನಾನು ಈ ಫ್ಲೋರೈಡ್ ವಿಚಾರದ ಬಗ್ಗೆ ಪ್ರತಿ ವಿಧಾನಸಭಾ ಅಧಿವೇಶನದಲ್ಲೂ ಚರ್ಚೆ ಮಾಡುತ್ತಲೇ ಇದ್ದೇನೆ. ನನ್ನ ಬಾಗೇಪಲ್ಲಿ ಕ್ಷೇತ್ರದ 500 ಹಳ್ಳಿಗಳ ಪೈಕಿ 379 ಹಳ್ಳಿಗಳಲ್ಲಿ ಫ್ಲೋರೈಡ್ ಪ್ರಮಾಣ ಅಧಿಕವಾಗಿ ಸುಮಾರು 25 ರಿಂದ 30 ಸಾವಿರ ಜನರು ಫ್ಲೋರೋಸಿಸ್ ಕಾಯಿಲೆಗೆ ತುತ್ತಾಗಿದ್ದಾರೆ. ಈ ಜನರಿಗೆ ಆರೋಗ್ಯ ಇಲಾಖೆಯಿಂದ ಕೂಡ ಪರಿಹಾರ ಸಿಕ್ಕಿಲ್ಲ. ಆರೋಗ್ಯ ಇಲಾಖೆಯವರಿಗೆ ಪ್ರಶ್ನೆ ಹಾಕಿದಾಗ ಅವರು ಏನು ಹೇಳಿದ್ದಾರೆಂದರೆ ಎಲ್ಲೆಲ್ಲಿ ಫ್ಲೋರೈಡ್ ಪ್ರಮಾಣ ಜಾಸ್ತಿ ಇದೆಯೋ ಅಲ್ಲೆಲ್ಲಾ ಫಿಲ್ಟರ್‌ಗಳನ್ನು ಹಾಕುತ್ತೇವೆಂದು ಉತ್ತರ ಕೊಟ್ಟಿದ್ದಾರೆ. ನಾನು ಪ್ರಶ್ನೆಯಲ್ಲಿ ಫ್ಲೋರೋಸಿಸ್ ಕಾಯಿಲೆಗೆ ತುತ್ತಾಗಿರುವವರಿಗೆ ನಿಮ್ಮ ಇಲಾಖೆಯಿಂದ ಏನು ವೈದ್ಯಕೀಯ ಸಲಹೆಯನ್ನು ಮಾಡುತ್ತೀರಿ ಎಂದು ಕೇಳಿದರೆ ಫಿಲ್ಟರ್‌ಗಳನ್ನು ಹಾಕುತ್ತೇವೆ ಎಂದು ಹೇಳಿದ್ದಾರೆ. ಇಂದು ಕುಡಿಯುವ ನೀರಿನಲ್ಲಿ ಫ್ಲೋರೈಡ್ ಪ್ರಮಾಣ ಅಧಿಕವಾಗಿ 30 ವರ್ಷದವರು 60 ವರ್ಷದವರಾಗಿ ಕಾಣುತ್ತಿದ್ದಾರೆ. ಸಾಮಾನ್ಯವಾಗಿ ಎಲ್ಲಾ ಕಡೆ ಮಾನವನಿಗೆ 100 ವರ್ಷ ಆಯುಷ್ಯ ಇದ್ದರೆ ಫ್ಲೋರೈಡ್ ಪ್ರಮಾಣ ಅಧಿಕವಾಗಿರುವ ಸ್ಥಳಗಳಲ್ಲಿ ಮಾನವನಿಗೆ 50 ವರ್ಷ ಆಯುಷ್ಯ ಮಾತ್ರ ಎನ್ನುವಂತಾಗಿದೆ. ಟಿ.ವಿ. ಮಾಧ್ಯಮದವರು ಮತ್ತು ಎಲ್ಲರೂ ಕೂಡ ಈಗಾಗಲೇ ಅಲ್ಲಿಗೆ ಬಂದು ಫ್ಲೋರೋಸಿಸ್ ಕಾಯಿಲೆಗೆ ತುತ್ತಾದ ಮಕ್ಕಳಲ್ಲಿ ಹಲ್ಲೇ ಇಲ್ಲದಿರುವುದನ್ನು ಮತ್ತು ಎಲುಬುಗಳೂ ಕೂಡ ಎಲ್ಲಾ ಕಡೆ ತಿಂದು

ಹೋಗುತ್ತಿರುವುದನ್ನು ನೋಡಿದ್ದಾರೆ. ಮೊನ್ನೆ ಒಂದು ಹಳ್ಳಿಯಲ್ಲಿ ನಾನು ಹೋಗಿದ್ದಾಗ ಒಂದು ಬೋರ್‌ವೆಲ್‌ನ ಪೈಪ್‌ನಲ್ಲಿ ಸಿಕ್ಕಿದ್ದ ಫ್ಲೋರೈಡ್‌ನ್ನು ಪೀಸ್ ಪೀಸ್ ಮಾಡಿ ತೋರಿಸಿದಾಗ ಅದನ್ನು ನಾನು ತೆಗೆದುಕೊಂಡಿದ್ದೇನೆ. ನಾನು ಅದನ್ನು ಅಧ್ಯಕ್ಷರಾದ ತಮಗೆ ಕಳುಹಿಸಿಕೊಡುತ್ತೇನೆ. ತಾವು ಅದನ್ನೂ ಗಮನಿಸಬಹುದು. ಈ ಫ್ಲೋರೈಡೇ ಒಂದು ರೀತಿ ಎಲುಬಿನ ರೀತಿಯಿದ್ದು ಇದು ಮನುಷ್ಯನ ದೇಹಕ್ಕೆ ಹೋಗಿ ಅವನ ಎಲುಬನ್ನೇ ತಿನುತ್ತಿರುವಂಥ ಪರಿಸ್ಥಿತಿಯಲ್ಲಿ ಇಂದು ನಾವು ಯಾರನ್ನು ಪ್ರಶ್ನೆ ಕೇಳಬೇಕಾಗಿದೆ ಮತ್ತು ಯಾವಾಗ ಇದಕ್ಕೆ ಪರಿಹಾರ ಸಿಗುತ್ತದೆ? ಈ ಪ್ರಶ್ನೆಗೆ ಗ್ರಾಮೀಣಾಭಿವೃದ್ಧಿ ಸಚಿವರು ಉತ್ತರ ಕೊಡಬೇಕು.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ಈ ಫ್ಲೋರೈಡ್ ವಿಚಾರವೇನಿದೆ ಇದು ತುಂಬಾ ಗಂಭೀರವಾದ ಸಮಸ್ಯೆಯಾಗಿದೆ. ರಾಜ್ಯದ ವಿವಿಧ ಭಾಗಗಳಲ್ಲಿ ಈ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಬಾಗೇಪಲ್ಲಿ ಮಟ್ಟಿಗೆ ಹೇಳುವುದಾದರೆ ಸಬ್‌ಮಿಷನ್ ಯೋಜನೆಯಡಿಯಲ್ಲಿ ನಾವು ಮೂರು ಕಾರ್ಯಕ್ರಮಗಳನ್ನು ತಯಾರು ಮಾಡುತ್ತಿದ್ದೇವೆ. ಇದರಿಂದ 379 ಗ್ರಾಮಗಳಿಗೆ ಅನುಕೂಲ ಆಗುತ್ತದೆ. ಕ್ವಾಲಿಟಿ ಆಫೆಕ್ಟ್ 289 ಗ್ರಾಮಗಳಲ್ಲಿ ಆಗಿದೆ. ಇದರಲ್ಲಿ ಗುಡಿಬಂಡೆಯ 176 ಹಾಗೂ ಬಾಗೇಪಲ್ಲಿಯ 253 ಗ್ರಾಮಗಳಿವೆ. ಆದುದರಿಂದ ಫ್ಲೋರೈಡ್ ಇಲ್ಲದೇ ಇರುವ ನೀರನ್ನು ಕೊಡುವುದಕ್ಕೋಸ್ಕರ ನಾವು ಮೂರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇದಕ್ಕಾಗಿ ನಾವು ಬೇರೆ ಕಡೆಯಿಂದ ಕೆರೆಯಿಂದ ನೀರನ್ನು ತರಬೇಕಾಗುತ್ತದೆ. ಇದಕ್ಕಾಗಿ 46 ಕೋಟಿ ರೂಪಾಯಿಗಳ ಒಂದು ಕಾರ್ಯಕ್ರಮ ತಯಾರು ಮಾಡಿದ್ದೇವೆ. ಇದಕ್ಕೆ ಅಫಿಶಿಯಲ್ ಕಮಿಟಿಯವರು ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಕೆರೆಯಿಂದ ನೀರನ್ನು ಪಡೆಯುವುದಕ್ಕೆ ಇರಿಗೇಷನ್ ಡಿಪಾರ್ಟ್‌ಮೆಂಟ್ ಅನುಮತಿ ಪಡೆಯಬೇಕಾಗಿತ್ತು. ಈಗ ಆ ಅನುಮತಿಯನ್ನು ಪಡೆಯಲು ಪ್ರಯತ್ನ ಮಾಡುತ್ತಿದ್ದೇವೆ. ಆ ಅನುಮತಿ ಬಂದನಂತರ ಡೀಟೈಲ್ಡ್ ಎಸ್ಟಿಮೇಟ್‌ನ್ನು ಮಾಡಿ ಇದಕ್ಕೆ ಆದ್ಯತೆಯನ್ನು ಕೊಟ್ಟು ಆದಷ್ಟು ಬೇಗ ಕೆಲಸವನ್ನು ಮಾಡಲು ಸರ್ಕಾರ ಖಂಡಿತ ಪ್ರಯತ್ನ ಮಾಡುತ್ತದೆ. ಇದು ಆಗುವವರೆಗೂ ಫ್ಲೋರೈಡ್ ಫಿಲ್ಟರ್‌ನ್ನು ಉಪಯೋಗಿಸಲು ಅಭ್ಯಂತರವಿಲ್ಲ. ಬಳ್ಳಾರಿಯಲ್ಲಿ ಈಗಾಗಲೇ 2000 ಫಿಲ್ಟರ್‌ಗಳನ್ನು ಉಪಯೋಗಿಸುತ್ತಿದ್ದೇವೆ. ಇನ್ನು 2 ಸಾವಿರದಿಂದ 10 ಸಾವಿರ ಫಿಲ್ಟರ್‌ಗಳನ್ನು ಉಪಯೋಗಿಸುವಂಥ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಈ ಭಾಗಕ್ಕೂ ಇದನ್ನು ಉಪಯೋಗಿಸಬಹುದು. ಏಕೆಂದರೆ ಸಬ್‌ಮಿಷನ್ ಪ್ರೋಗ್ರಾಂನಡಿಯಲ್ಲಿ ಹೊಸ ಪ್ರಾಜೆಕ್ಟ್‌ನ್ನು ಮಾಡುವುದಕ್ಕೆ ತಕ್ಷಣ ಆಗುವುದಿಲ್ಲ. ಇದು ಆಗುವವರೆಗೂ ಫಿಲ್ಟರ್ ಉಪಯೋಗ ಮಾಡುವ ವಿಚಾರವೇನಿದೆ ಅದರಿಂದ ತಪ್ಪೇನೂ ಆಗುವುದಿಲ್ಲವಾದ ಕಾರಣ ಫಿಲ್ಟರ್‌ನ್ನು ಉಪಯೋಗಿಸಬೇಕು ಎಂದು ಸೂಚಿಸುತ್ತೇನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ(ಕಡೂರು): ಮಾನ್ಯ ಅಧ್ಯಕ್ಷರೆ, ಕಡೂರು ತಾಲ್ಲೂಕಿನಲ್ಲೂ ಕೂಡ ಸೆಂಟ್ರಲ್ ಜಿಯಾಲಜಿಕಲ್ ಡಿಪಾರ್ಟ್‌ಮೆಂಟ್‌ನವರು ಸರ್ವೆ ಮಾಡಿದ್ದಾರೆ. ಅಲ್ಲೇನಾಗಿದೆ ಫ್ಲೋರೈಡ್ ಮನುಷ್ಯನ ರಕ್ತವನ್ನು ಸೇರಿ ಏನು ರಕ್ತ ಮೂಳೆಯಲ್ಲಿ ಉತ್ಪತ್ತಿಯಾಗುತ್ತದೆ ಆ ಜಾಗದಲ್ಲಿ ಅದರ ಕಾರ್ಯ ಪ್ರಾರಂಭ ಮಾಡಿ ಮೂಳೆಯನ್ನು ಮೃದು ಮಾಡುತ್ತದೆ. ಅದರ ಸಿಂಪ್ಟಮ್ಸ್ ಹೇಗಿರುತ್ತದೆಂದರೆ ನೀರನ್ನು ಕುಡಿದರೆ ಹಲ್ಲು ಹಳದಿ ಬಣ್ಣದಲ್ಲಿ ಇರುತ್ತದೆ. ಆದರೆ ಪ್ರತಿ ಬಾರಿಯೂ ಕೂಡ ಶ್ರೀ ಘೋರ್ಪಡೆಯವರು ಇದೇ ಉತ್ತರವನ್ನು ಕೊಡುತ್ತಿದ್ದಾರೆ. ಇವರು ಪರಿಹಾರ ಇಂಪ್ಲಿಮೆಂಟ್ ಮಾಡುವಷ್ಟರೊಳಗೆ ಎಷ್ಟೋ ಜನರು ಸತ್ತು ಹೋಗಿರುತ್ತಾರೆ ಅಥವಾ ಅವರು ಬದುಕಿದ್ದರೂ ಸತ್ತಂತೆ ಇರಬೇಕಾಗುತ್ತದೆ. ಆದುದರಿಂದ ಮಾನ್ಯ ಸಚಿವರು ಯಾವಾಗ ಈ ಪ್ರಾಜೆಕ್ಟ್ ಅನ್ನು ಇಂಪ್ಲಿಮೆಂಟ್ ಮಾಡಿ ಸಮಸ್ಯೆಯನ್ನು ಪರಿಹರಿಸುತ್ತಾರೆ ಎನ್ನುವ ಬಗ್ಗೆ ಸ್ಪಷ್ಟವಾಗಿ ಇಂದು ಸದನದಲ್ಲಿ ಹೇಳಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ: ಮಾನ್ಯ ಅಧ್ಯಕ್ಷರೆ, ನನ್ನ ತಾಲ್ಲೂಕಿನಲ್ಲೂ ಕೂಡ ಈ ಸಮಸ್ಯೆ ಇದೆ. ಈಗಾಗಲೇ ಮಾನ್ಯ ಸಚಿವರು ಮಾತನಾಡುತ್ತಾ 43 ಕೋಟಿ ರೂಪಾಯಿಗಳ ಒಂದು ಕಾರ್ಯಕ್ರಮದ ಬಗ್ಗೆ ಏನು ಹೇಳಿದರೋ ಆ ಕಾರ್ಯಕ್ರಮ ಜಾರಿಗೆ ಆ ಗ್ರಾಮದವರೂ ಕೂಡ ಶೇಕಡ 10ರಷ್ಟು ವಂತಿಗೆಯನ್ನು ಕೊಡಬೇಕಾಗುತ್ತದೆ. ನಮ್ಮ ಸರ್ಕಾರವಿದ್ದಾಗ ಆ ಹಣವನ್ನು ಕೂಡ ನಾವೇ ಕೊಡುತ್ತಿದ್ದೆವು. ಅದು ಡ್ಯಾನಿಡಾ ಯೋಜನೆಯಲ್ಲಿ ಬರುತ್ತಿತ್ತು. ಈಗ ಫ್ಲೋರೈಡ್ ಸಮಸ್ಯೆ ಕೋಲಾರ ಕ್ಷೇತ್ರದ ಎರಡು ಹಳ್ಳಿಗಳಲ್ಲಿ ಕಂಡುಬಂದಿದೆ. ನೀವು ಕೆರೆಯಿಂದ ನೀರನ್ನು ಪಡೆಯಬೇಕು ಎಂದು ಹೇಳಿದ್ದೀರಿ. ನಮ್ಮ ಕಡೆ ಕೆರೆಯಲ್ಲಿ ನೀರು 5 ವರ್ಷಕ್ಕೋ 6 ವರ್ಷಕ್ಕೋ ತುಂಬುವುದು. ಈಗ ಅಲ್ಲೆಲ್ಲಾ ಹೂಳು ತುಂಬಿಹೋಗಿದೆ. ಅಲ್ಲಿ ಈಗ ನೀರು ನಿಲ್ಲುವುದೇ ಇಲ್ಲ. ಆದುದರಿಂದ ನೀವು ಕಾವೇರಿ ನೀರನ್ನು ಒದಗಿಸಲು 5ನೇ ಸ್ಟೇಜ್, 6ನೇ ಸ್ಟೇಜ್ ಎಂದು ಮಾಡಿ ಕೋಲಾರ ಜಿಲ್ಲೆಯ ಹಳ್ಳಿಗಳಿಗೆ ಕುಡಿಯುವ ನೀರಿನ ಸರಬರಾಜು ಮಾಡಿ. ನಾವೇನೂ ಕಾವೇರಿ ನದಿಗೆ ಬಹಳ ದೂರವಿಲ್ಲ. ಏಕೆಂದರೆ ಫ್ಲೋರೈಡ್ ಸಮಸ್ಯೆ ಕೇವಲ ಬಾಗೇಪಲ್ಲಿ ಗುಡಿಬಂಡೆಯಲ್ಲಿ ಮಾತ್ರವಲ್ಲ ಮಾನ್ಯ ಅಧ್ಯಕ್ಷರ ಕ್ಷೇತ್ರದ ನಾಲ್ಕು ಕಡೆಗಳಲ್ಲಿಯೂ ಆಗಿದೆ. ಅದು ಅವರ ಗಮನಕ್ಕೂ ಬಂದಿದೆ. ಹಿಂದೆ ಕಾವೇರಿ ನದಿಯಿಂದ 122 ಹಳ್ಳಿಗಳಿಗೆ ನೀರನ್ನು ಕೊಡುವ ಒಂದು ಪ್ರಪೋಸಲ್ ಇದೆ. ಆದುದರಿಂದ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ಇದನ್ನು ಏಕೆ ಜಾರಿ ಮಾಡಬಾರದು? ನಾವೇನೂ ವ್ಯವಸಾಯಕ್ಕೆ ನೀರನ್ನು ಕೇಳುತ್ತಿಲ್ಲ.

ಅಧ್ಯಕ್ಷರು: ಗೌಡರೆ, ಸಪ್ಲಿಮೆಂಟರಿ ಪ್ರಶ್ನೆ ಕೇಳಿ ಎಂದರೆ ಭಾಷಣ ಮಾಡುತ್ತಿದ್ದೀರಿ.

ಫ್ಲೋರೈಡ್ ಸಮಸ್ಯೆ ನನಗೂ ಗೊತ್ತಿದೆ.

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ: ನಿಮಗೂ ಗೊತ್ತಿದೆ. ಆದರೆ, ನೀವು ಮಾತನಾಡುವುದಕ್ಕೆ ಆಗುತ್ತಿಲ್ಲವಾದ್ದರಿಂದ ನಾನೇ ಹೇಳುತ್ತಿದ್ದೇನೆ. ನಾನು ಹೇಳುವುದೇನೆಂದರೆ ಶೇಕಡ 10ರಷ್ಟು ವಂತಿಗೆ ಏನು ಗ್ರಾಮದವರು ಕಟ್ಟಬೇಕೋ ಅದನ್ನು ಸರ್ಕಾರವೇ ಕಟ್ಟಬೇಕು ಮತ್ತು ಕಾವೇರಿ ನದಿಯಿಂದ ನೀರನ್ನು ನಮ್ಮ ಜಿಲ್ಲೆಯ ಗ್ರಾಮಗಳಿಗೆ ಕುಡಿಯುವ ನೀರಿನ ಸಲುವಾಗಿ ಪ್ರಪೋಸಲ್ ಏನಿದೆ, ಅದನ್ನು ಜಾರಿಗೆ ತರಬೇಕೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

ಶ್ರೀ ಎನ್.ಸಂಪಂಗಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು, ಫಿಲ್ಟರ್ ಉಪಯೋಗಿಸಬೇಕೆಂದು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ಫಿಲ್ಟರ್ ಪ್ರದರ್ಶನ ಕೂಡ ಅಲ್ಲಿ ಆಯಿತು. ಅಲ್ಲಿ ಏನಾಗಿದೆ ಎಂದರೆ ಫಿಲ್ಟರ್‌ಗಳನ್ನು ಏನು ಕೊಡುತ್ತಾರೆ ಅದಕ್ಕೆ ಒಂದು ಪೌಡರ್ ಕೊಡುತ್ತಾರೆ. ಆದರೆ ಆ ಪೌಡರ್‌ಗಳು ಸರಿಯಾದ ಸಮಯಕ್ಕೆ ಸಿಗದೆ ಮತ್ತೆ ಜನ ಅದೇ ನೀರನ್ನು ಕುಡಿಯುವುದಕ್ಕೆ ಪ್ರಾರಂಭ ಮಾಡಿದರು. ಆ ಫಿಲ್ಟರ್ ವಿಚಾರದಲ್ಲಿ ಕೂಡ ಫೆಲ್ಯೂರ್ ಆಯಿತು. ಈಗ ನಾನು ಮಾನ್ಯ ಮಂತ್ರಿಯವರಿಗೆ ಕೇಳುವುದೇನೆಂದರೆ ಗುಡಿಬಂಡೆಯಲ್ಲಿ ಡ್ಯಾನಿಡಾ ಯೋಜನೆ ಇದೆ. ಅದನ್ನು ಬಾಗೇಪಲ್ಲಿಗೂ ಕೂಡ ವಿಸ್ತರಣೆ ಮಾಡಿ. ಮತ್ತು ಅಂತರ್ಜಲ ಮಟ್ಟವನ್ನು ಹೆಚ್ಚಿಸುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ಇವತ್ತು ಏನಾಗಿದೆಯೆಂದರೆ ಅಂತರ್ಜಲ ಮಟ್ಟ ಬಹಳ ಕುಸಿದಿದೆ. ಕಾರಣವೇನೆಂದರೆ ಗಣಿಗಾರಿಕೆ ಇಲಾಖೆಯಿಂದ ಇವೊತ್ತು ಮರಳನ್ನು ಸಾಗಿಸುವುದಕ್ಕೆ ಅನುಮತಿ ಕೊಟ್ಟಿದ್ದೀರಿ. ಆದುದರಿಂದ ನಮ್ಮ ಭಾಗದಲ್ಲಿ ಮರಳನ್ನೆಲ್ಲಾ ಕೂಡ ಸಾಗಿಸುತ್ತಿದ್ದಾರೆ. ಇದರಿಂದ ಅಂತರ್ಜಲ ಮಟ್ಟ ಕುಸಿಯುತ್ತಿದೆ. ಇದು ಇವತ್ತು ನಮಗೆ ಬಹಳ ಸಮಸ್ಯೆಯಾಗಿದೆ. ಇದನ್ನೂ ಸಹ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಗಮನದಲ್ಲಿಟ್ಟುಕೊಂಡು ನಮ್ಮ ಭಾಗದಲ್ಲಿ ಇರತಕ್ಕಂಥ ಮರಳು ಸಾಗಾಣಿಕೆಯನ್ನು ಬ್ಯಾನ್ ಮಾಡಬೇಕು. ಮತ್ತು ಅಂತರ್ಜಲ ಮಟ್ಟ ಹೆಚ್ಚಿಸುವುದಕ್ಕೆ ಏನು ಕಾರ್ಯ ಕ್ರಮ ಹಾಕಿಕೊಂಡಿದ್ದೀರಿ ಅದನ್ನು ಬಹಳ ಬೇಗ ಮಾಡಿಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ನಾನು ಮೊದಲೇ ಹೇಳಿದ ಪ್ರಕಾರ ಇದು ಹಲವಾರು ಜಿಲ್ಲೆಗಳಲ್ಲಿ ಬಹಳ ಗಂಭೀರವಾದಂತಹ ವಿಚಾರ ಇದೆ. ಕೋಲಾರ ಜಿಲ್ಲೆಯಲ್ಲಿ ಬಹಳ ಗಂಭೀರವಾದಂತಹ ಪ್ರಶ್ನೆ ಕಾರಣವೇನೆಂದರೆ ಅಲ್ಲಿ ಬಹಳಷ್ಟು ಬೋರ್‌ವೆಲ್ ಹಾಕಿದರೂ ಕೂಡ ಸ್ವಚ್ಛ ನೀರು ಸಿಗುವುದು ಕಷ್ಟವಾಗಿದೆ. ನಮ್ಮ ಮಾಹಿತಿ ಪ್ರಕಾರ ಎಷ್ಟು ಆಳವಾಗಿ ಬೋರ್‌ವೆಲ್ ಕೊರೆದುಕೊಂಡು ಹೋಗುತ್ತೀರಿ. ಅಷ್ಟು ಫ್ಲೋರೈಡ್ ಪ್ರಾಬ್ಲಂ ಜಾಸ್ತಿಯಾಗುತ್ತಿದೆ. ಆಲ್ ಇಂಡಿಯಾ ಸೆಮಿನಾರ್ ಆದಾಗ

ನಾನು ಈ ಮಾತನ್ನು ಹೇಳಿದೆ. 1972ರಲ್ಲಿ ಕರ್ನಾಟಕದಲ್ಲಿ ಮೂರು ಲಕ್ಷ ಕೆರೆಗಳು ಇದ್ದವು. ಆ ಮೂರು ಲಕ್ಷ ಕೆರೆಗಳು ಹೋಗಿಬಿಟ್ಟಿವೆ, ಅದರ ಜಾಗದಲ್ಲಿ ಎರಡು ಲಕ್ಷ ಬೋರ್‌ವೆಲ್ ಇದೆ. ಆ ಬೋರ್‌ವೆಲ್‌ನಲ್ಲಿ ಈ ಸಮಸ್ಯೆಯನ್ನು ಸರಿಪಡಿಸುವುದಕ್ಕೆ ಆಗುತ್ತಿಲ್ಲ. ಅದಕ್ಕೋಸ್ಕರವೇ ಇದು ಬಹಳ ಗಂಭೀರವಾದಂತಹ ಪ್ರಶ್ನೆಯಾಗಿದೆ ಅದಕ್ಕೋಸ್ಕರ ಕೆರೆಯಿಂದ ನೀರು ತರುವಂತಹ ವಿಚಾರ ಇತ್ತು. ಕೆರೆಯಿಂದ ನೀರು ತಂದು ಅದನ್ನು ಕುಡಿಯುವುದಕ್ಕೆ ಕೊಡುವುದು ಇದೆ. ಅದಕ್ಕೋಸ್ಕರ ಸಬ್‌ಮಿಷನ್ ಪ್ರೋಗ್ರಾಂ ಅಡಿಯಲ್ಲಿ ಮೂರು ಪ್ರಾಜೆಕ್ಟ್‌ಗಳನ್ನು ನಾವು ತಯಾರು ಮಾಡಿದ್ದು ಅದಕ್ಕೆ 46 ಕೋಟಿ ರೂಪಾಯಿ ಆಗುತ್ತದೆ. ಆದರೆ ಇದಕ್ಕೆ ನೀರಾವರಿ ಇಲಾಖೆಯವರು, ಅಲ್ಲಿರತಕ್ಕಂಥ ಗ್ರಾಮಸ್ಥರು, ರೈತರು ಇದನ್ನು ಒಪ್ಪಬೇಕಾಗುತ್ತದೆ. ಈಗ ಸ್ವಚ್ಛವಾದಂತಹ ನೀರು ಸಾಕಷ್ಟು ಇಲ್ಲವೆಂದರೆ ನಾವು ಕೆರೆ ನೀರನ್ನಾದರೂ ಕುಡಿಯುವದಕ್ಕೆ ಉಪಯೋಗಿಸಿಕೊಳ್ಳಬೇಕು. ಇಂತಹ ಕಷ್ಟದ ಪರಿಸ್ಥಿತಿ ಹಳ್ಳಿಯಲ್ಲಿ ಇದೆ. ಆದುದರಿಂದ ವಾಟರ್ ಪಾಲಿಸಿ ಏನಿದೆ ಅದನ್ನು ನಾನು ಪ್ರಸ್ತಾಪ ಮಾಡಿದೆ. ವಾಟರ್ ಪಾಲಿಸಿಯಲ್ಲಿ ನಾವು ಸ್ಪಷ್ಟವಾಗಿ ಇರಬೇಕು. ಇಂತಹ ಪ್ರಶ್ನೆ ಬಂದಾಗ ನಾವು ಆದ್ಯತೆಯನ್ನು ಯಾವುದಕ್ಕೆ ಕೊಡಬೇಕು? ಕುಡಿಯುವ ನೀರಿಗೆ ಕೊಡಬೇಕಾ ಅಥವಾ ಫಲ ಬೆಳೆಯುವುದಕ್ಕೆ ಕೊಡಬೇಕಾ? ಈ ಪ್ರಶ್ನೆ ಇನ್ನೂ ಇತ್ಯರ್ಥವಾಗಿಲ್ಲ. ಆದರೆ ಇದಕ್ಕೆ ಇನ್ನೂ ಒಂದು ಮಾರ್ಗವಿದೆ. ಅದೇನೆಂದರೆ ಫ್ಲೋ ವಾಟರ್ ಅನ್ನು ಉಪಯೋಗಿಸಬೇಕು. ಅಂದರೆ ನದಿ ನೀರು ಎಲ್ಲೆಲ್ಲಿ ಇದೆ ಅಲ್ಲಿಂದ ನೀರು ತರಬೇಕು. ಆದುದರಿಂದ ಇದು ಹೇಳಿದ ತಕ್ಷಣ ಆಗುವಂತಹ ಕೆಲಸವಲ್ಲ. ಇವತ್ತು ನಮ್ಮ ಧೋರಣೆ ಏನಿದೆಯೆಂದರೆ ಅಂತರ್ಜಲ ಎಷ್ಟರಮಟ್ಟಿಗೆ ಇದೆ ಅದನ್ನು ನಾವು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು ಆ ಅಂತರ್ಜಲವನ್ನು ಕಾಪಾಡುವುದಕ್ಕೆ ಏನೇನು ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಆ ಸಿದ್ಧತೆಯನ್ನು ಮಾಡಿಕೊಳ್ಳಬೇಕು. ಇಷ್ಟೆಲ್ಲಾ ಮಾಡಿದ ನಂತರವೂ ಕೂಡ ನೀರಿನ ಅಭಾವವಿದ್ದರೆ ಅಥವಾ ಕ್ವಾಲಿಟಿ ಪ್ರಾಬ್ಲಂ ಇದ್ದರೆ ಆಗ ಮಾತ್ರ ನದಿ ನೀರು ತರುವಂತಹ ಯೋಚನೆ ಮಾಡಬೇಕು. ಈ ಮಟ್ಟಕ್ಕೆ ಇನ್ನೂ ನಾವು ಬಂದಿಲ್ಲ. ಅದಕ್ಕೆ ಕೋಟಿಗಟ್ಟಲೆ ಹಣ ಬೇಕಾಗುತ್ತದೆ. ಇಡೀ ಕರ್ನಾಟಕದಲ್ಲಿ ಅಷ್ಟೇ ಅಲ್ಲ, ಇಡೀ ದೇಶದಲ್ಲಿ ಕುಡಿಯುವ ನೀರಿಗೋಸ್ಕರ ನಾವು ನದಿಯಿಂದ ನೀರು ತರುವಂತಹ ಒಂದು ಪಾಲಿಸಿ ಮಟ್ಟಕ್ಕೆ ನಾವು ಬಂದಿಲ್ಲ. ಎಲ್ಲಿ ಅನಿವಾರ್ಯವಿದೆ ಅಲ್ಲಿ ನಾವು ಮಾಡುತ್ತಿದ್ದೇವೆ. ಅದಕ್ಕೋಸ್ಕರ, ಈ ಸಬ್‌ಮಿಷನ್ ಪ್ರೋಗ್ರಾಂ ಏನಿದೆ ಅದಕ್ಕೆ ಜಾಸ್ತಿ ದುಡ್ಡು ಬೇಕಾಗುತ್ತದೆಂದು ಹೇಳಿ ಈ ಸಬ್‌ಮಿಷನ್ ಪ್ರೋಗ್ರಾಂ ಅಡಿಯಲ್ಲಿ ನಾವು ಇಂತಹ ಕೆಲಸವನ್ನು ಮಾಡುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ, ಇದು ತಕ್ಷಣ ಆಗುವಂತಹ ಕೆಲಸವಲ್ಲ. ಆದರೆ ಅದರ ಪ್ರಯತ್ನವಂತೂ ಈ ದಿಸೆಯಲ್ಲಿ ಇದೆ.

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ: ನದಿ ನೀರು ತರುವುದಕ್ಕೆ

ಈಗಿನಿಂದಲಾದರೂ ಚಿಂತನೆ ಮಾಡಿ.

ಅಧ್ಯಕ್ಷರು: ಮುಂದಿನ ಪ್ರಶ್ನೆ ವಿ.ಕೃಷ್ಣಪ್ಪನವರದು, ಈ ಪ್ರಶ್ನೆಗೆ ಹತ್ತು ದಿವಸ ಸಮಯ ಬೇಕೆಂದು ಸರ್ಕಾರದವರು ಕೇಳಿದ್ದಾರೆ.

ಶ್ರೀ ವಿ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ನಮ್ಮದು ಒಂದೊಂದೇ ಪ್ರಶ್ನೆ ಬರುವುದು. ಆ ಒಂದು ಪ್ರಶ್ನೆಗೆ ನಮಗೆ ಉತ್ತರ ಬರುವುದಿಲ್ಲವೆಂದರೆ ಹೇಗೆ? ದಯಮಾಡಿ ನಾಳೆ ಅದಕ್ಕೆ ಉತ್ತರ ಕೊಡಿಸಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಒಂದು ಪ್ರಶ್ನೆಗೆ ಹತ್ತು ದಿವಸ ಸಮಯ ತೆಗೆದುಕೊಂಡರೆ ಅಷ್ಟೊತ್ತಿಗೆ ಅಧಿವೇಶನ ಮುಗಿದು ಹೋಗುತ್ತದೆ. ಒಂದು ಸ್ಟಾರ್ಡ್ ಕ್ವೆಶ್ಚನ್‌ಗೆ ಹತ್ತು ದಿವಸ ಸಮಯ ತೆಗೆದುಕೊಂಡರೆ ಹೇಗೆ?

ಅಧ್ಯಕ್ಷರು: ಬಹುಶಃ ಅನೇಕ ವಿಷಯಗಳನ್ನು ಸಂಗ್ರಹಿಸಬೇಕಾಗಿದೆ ಎಂದು ಕಾಣುತ್ತದೆ, ಅದಕ್ಕೆ ಇರಬಹುದು.

ಶ್ರೀ ವಿ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಕಳೆದ ಸದನದಲ್ಲಿ ಇದೇ ರೀತಿ ಆಯಿತು. ಮತ್ತೇ ಆ ಪ್ರಶ್ನೆ ಬರುವುದೇ ಇಲ್ಲ. ದಯವಿಟ್ಟು ನಾಳೆ ನನಗೆ ಉತ್ತರ ತರಿಸಿಕೊಡಿ.

ಅಧ್ಯಕ್ಷರು: ಸರ್ಕಾರದವರು ಹತ್ತು ದಿವಸ ಸಮಯ ಕೇಳಿದ್ದಾರೆ. ನಾಳೆ ಹೇಗೆ ನಾನು ತರಿಸಿಕೊಡಲಿ?

(ಗೊಂದಲ)

ರಾಜ್ಯದಲ್ಲಿ ವೈದ್ಯರ ಮತ್ತು ವೇದ್ಯಕೀಯೇತರ ನೇಮಕಾತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 26(118)

ಸದಸ್ಯರ ಹೆಸರು: ಶ್ರೀ ಸದಾನಂದಗೌಡ ಡಿ.ವಿ.(ಪುತ್ತೂರು)

ಉತ್ತರಿಸುವ ಸಚಿವರು: ಡಾ।। ಎ.ಬಿ.ಮಾಲಕರೆಡ್ಡಿ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಮತ್ತು